## ಪ್ರಧಾನ ಹಿರಿಯ ಸಿವಿಲ್ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ. ಹುಣಸೂರು.

## ಸಿ.ಸಿ. ಸಂಖ್ಯೆ: 207/2024

**ಸಾಕ್ಷಿಯನ್ನು ದಿಃ 09.12.2025 ರಂದು ಕರೆಸಿ ಪ್ರಮಾಣವಚನ ಬೋಧಿಸಲಾಯಿತು.**

| | | | |
|---|---|---|---|
| ಹೆಸರು | ಭವ್ಯ | ಸಿಡಬ್ಲ್ಯೂಃ 4 | ಪಿಡಬ್ಲ್ಯೂಃ 4 |
| ಗಂಡನ ಹೆಸರು | ನಾಗರಾಜು | | |
| ವಯಸ್ಸು | 36 ವರ್ಷ | | |
| ಕೆಲಸ | ಗೃಹಿಣಿ | | |
| ವಾಸಸ್ಥಳ | ಕಲ್ಲುಣಿಕೆ | | |

## ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ

ಚಾಸಾ–1 ನನ್ನ ವಾರಗಿತ್ತಿ. ಚಾಸಾ–2 ನನ್ನ ಮೈದುನ. ಚಾಸಾ–3 ಗೊತ್ತು. ಅವರು ನಮ್ಮ ಊರಿನವರು. ದಿಃ 19.01.2024ರಂದು ಸಂಜೆ 4 ಗಂಟೆಗೆ ನಾನು ಮನೆಯ ಒಳಗೆ ಕೆಲಸ ಮಾಡುತ್ತಿದ್ದಾಗ ಚಾಸಾ–2 ರವರ ಮನೆಯ ಹೊರಗೆ ಜೋರಾಗಿ ಗಲಾಟೆಯ ಶಬ್ದ ಕೇಳಿ ಬಂತು. ನಾನು ಹೋಗಿ ನೋಡಿದಾಗ, ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ–1 ಮತ್ತು 2 ರವರಿಗೆ ಬಾಯಿಗೆ ಬಂದಂತೆ ಸೂಳೆ ಮುಂಡೆ ಎಂದು ಕೆಟ್ಟ ಪದಗಳಿಂದ ಬೈಯುತ್ತಿದ್ದರು. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ–1 ರವರು ಧರಿಸಿದ್ದ ನೈಟಿಯ ಕಾಲರ್ ಅನ್ನು ಏಕಾ ಏಕಿ ಹಿಡಿದುಕೊಂಡಾಗ ಚಾಸಾ–1 ರವರು ಕೆಳಗೆ ಬಿದ್ದರು. ಆಗ ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ–1 ರವರ ಹೊಟ್ಟೆಗೆ ಕಾಲಿನಿಂದ ಒದ್ದ. ಆಗ ಅಲ್ಲಿಗೆ ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನ ಸಹೋದರನಾದ 2ನೇ ಆರೋಪಿ ಬಂದ. 2ನೇ ಆರೋಪಿಯು ಚಾಸಾ–2 ರವರಿಗೆ ಹಿಡಿದುಕೊಂಡು ಕೈಯಿಂದ ತುಟಿಗೆ ಮತ್ತು ಕುತ್ತಿಗೆಗೆ ಹೊಡೆದರು. ಅದರಿಂದ ತುಟಿಗೆ ರಕ್ತಗಾಯವಾಯಿತು. ನಾನು ಮತ್ತು ಚಾಸಾ–3 ರವರು ಗಲಾಟೆಯನ್ನು ಬಿಡಿಸಿದೆವು. ಚಾಸಾ–1 ಮತ್ತು 2 ರವರು ಹುಣಸೂರು ಸರ್ಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ಹೋದರು. ಈ ಬಗ್ಗೆ ನಾನು ಪೋಲೀಸರಿಗೆ ಹೇಳಿಕೆ ನೀಡಿದ್ದೇನೆ. ಆ ದಿನ ಗಲಾಟೆ ಮಾಡಿದ ವ್ಯಕ್ತಿಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ 2ನೇ ಆರೋಪಿಯನ್ನು ನೋಡಿ ಗುರುತಿಸುತ್ತಾರೆ. ಆ ದಿನ ಚಾಸಾ–1 ಮತ್ತು 2 ರವರು ಯಾವ ಬಟ್ಟ ಧರಿಸಿದ್ದರು ಎಂದು ಗೊತ್ತಿದೆ. ಅವರ ಬಟ್ಟೆಗಳು

ಹರಿದು ಹೋಗಿದ್ದವು. ಅವುಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿ ನ್ಯಾಯಾಲಯದ ಮುಂದಿರುವ ಮು.ಮಾ-1 ಮತ್ತು 2ನ್ನು ನೋಡಿ ಗುರುತಿಸುತ್ತಾರೆ.

**(ಈ ಹಂತದಲ್ಲಿ ಮಾನ್ಯ ಸಅಅ ಯವರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿರುತ್ತಾರೆ. ಸಾಕ್ಷಿ ತನ್ನ ಸಾಕ್ಷ್ಯವನ್ನು ಅಭಿಯೋಜನೆಗೆ ಪ್ರತಿಕೂಲವಾಗಿ ನುಡಿದಿರುವ ಕಾರಣ ಅವರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿಸಲಾಯಿತು)**

**ಪಾಟೀಸವಾಲುಃ ಮಾನ್ಯ ಸಸಅ ರವರಿಂದಃ**

ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ-2 ರವರ ಮನೆಗೆ ಏಕಾ ಏಕಿ ನುಗ್ಗಿ ಚಾಸಾ-1 ರವರ ನೈಟಿಯ ಮುಂಭಾಗವನ್ನು ಬಿಗಿಯಾಗಿ ಹಿಡಿದು ಧರಧರನೇ ಎಳೆದುಕೊಂಡು ಬಂದು ರಸ್ತೆಯಲ್ಲಿ ಕೆಳಕ್ಕೆ ಕೆಡವಿದರು ಎಂದರೆ ಸರಿ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ-1 ರವರ ನೈಟಿಯನ್ನು ಹರಿದು ಅವರಿಗೆ ಅವಮಾನ ಮಾಡಿದ ಎಂದರೆ ಸರಿ. ಕಾನೂನು ಸಂಘರ್ಷಕ್ಕೆ ಒಳಗಾದ ಬಾಲಕನು ಚಾಸಾ-1ರವರಿಗೆ ಕೈಯಿಂದ ಬಲಭಾಗದ ಕತ್ತಿಗೆ ಹೊಡೆದು ನೋವುಂಟು ಮಾಡಿದ ಎಂದರೆ ಸರಿ.

**ಪಾಟೀ ಸವಾಲುಃ ಆರೋಪಿ ಪರ ಶ್ರೀ.HK ಪರ ಶ್ರೀ. DRM ವಕೀಲರಿಂದಃ**

ಕಾಲಾವಕಾಶ ಕೋರಿದ್ದು, ಸೂಕ್ತ ಕಾರಣಗಳನ್ನು ನೀಡದೇ ಇರುವುದರಿಂದ ಹಾಗೂ ಮಾನ್ಯ ಸರ್ವೋಚ್ಛ ನ್ಯಾಯಾಲಯವು Special leave petition (Criminal) No.969/2025 between central Buro of investigation V/s Mir Usman alias Ara alias Mir Usman Ali ದಿಃ 22.09.2025 ರಲ್ಲಿ ಕ್ರಿಮಿನಲ್ ಪ್ರಕರಣಗಳನ್ನು ನಡೆಸುವ ಬಗ್ಗೆ ಕೆಲವು ತತ್ವಗಳನ್ನು ಮತ್ತು ನಿಯಮಗಳನ್ನು ರೂಪಿಸಿದ್ದು, ಅದನ್ನು ಅನ್ವಯಿಸುತ್ತಾ ವಕೀಲರು ಮಾಡಿದ ಕೋರಿಕೆಯನ್ನು ತಳ್ಳಿಹಾಕಿ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

**ಮರುವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು).

ಓ.ಹೇ.ಕೇ.ಸ.ಇದೆ.

(ಅನಿತ)
ಪ್ರಧಾನ ಹಿರಿಯ ಸಿವಿಲ್ ಜಡ್ಜ್ ಮತ್ತು
ಜೆ.ಎಂ.ಎಫ್.ಸಿ., ಹುಣಸೂರು.